೧	೨	೩
೫	ಶ್ರೀನಿವಾಸಪುರ	೩೭.೫೦
೬	ಚಿಂತಾಮಣಿ	೩೭.೫೦
೭	ಶಿಡ್ಲಘಟ್ಟ	೩೭.೫೦
೮	ಬಾಗೇಪಲ್ಲಿ	೩೭.೫೦
೯	ಗೌಡಿಬಂಡೆ	೩೭.೫೦
	ಒಟ್ಟು	೩೩೭.೫೦ ಲಕ್ಷ ರೂ.ಗಳು

(ಇ) ೧ ಭೂಸಾರ ಸಂರಕ್ಷಣೆ ಮತ್ತು ಅರಣ್ಯೀಕರಣ ಕಾಮಗಾರಿಗಳು.

೨ ಸಣ್ಣ ನೀರಾವರಿ ಕಾಮಗಾರಿಗಳು.

೩ ಕೂಡು ರಸ್ತೆಗಳು.

೪ ಪ್ರಾಥಮಿಕ ಶಾಲೆ ಮತ್ತು ಆಂಗನವಾಡಿ ಕಟ್ಟಡಗಳ ಕೆಲಸಗಳು,

ಶಿಗ್ಗಾಂವ ತಾಲ್ಲೂಕು ಕುನ್ನೂರ ಗ್ರಾಮದಲ್ಲಿ ಮಾವಿನ ಹಣ್ಣಿನ ಸಂಶೋಧನಾ ಕೇಂದ್ರ

೫೦೦ (೭೮೪) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ).—ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಎಷ್ಟು ಕಡೆ ತೋಟಗಾರಿಕಾ ಸಂಶೋಧನಾ ಕೇಂದ್ರ ಮತ್ತು ಮಾವಿನ ಸಂಶೋಧನಾ ಕೇಂದ್ರ ಪ್ರಾರಂಭ ಮಾಡಲಾಗಿದೆ ? (ಅವುಗಳ ವಿವರ ನೀಡುವುದು)

ಆ) ಶಿಗ್ಗಾಂವ ತಾಲ್ಲೂಕು ಕುನ್ನೂರ ಗ್ರಾಮದ ಹತ್ತಿರ ೧೫೦ ಎಕರೆ ಜಮೀನು ತೋಟಗಾರಿಕೆ ಇಲಾಖೆ ಅಥವಾ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ಕೊಡಲು ತಯಾರಿದ್ದು ಅಲ್ಲಿ ಮಾವಿನ ಹಣ್ಣಿನ ಸಂಶೋಧನಾ ಕೇಂದ್ರ ತೆರೆಯಲಾಗುವುದೇ ?

ಇ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಒಟ್ಟು ೨೯ ಸಂಶೋಧನಾ ಕೇಂದ್ರಗಳು ತೋಟಗಾರಿಕೆ ಸಂಶೋಧನೆಯಲ್ಲಿ ನಿರತವಾಗಿದೆ. ೭ ಸಂಶೋಧನಾ ಕೇಂದ್ರಗಳಲ್ಲಿ ಮಾವಿನ ಸಂಶೋಧನೆ ಮಾಡಲಾಗುತ್ತಿದೆ. ವಿವರ ಅನುಬಂಧ–೧ ರಲ್ಲಿ ಲಗತ್ತಿಸಿದೆ.

ಆ) ಒಂದು ವೇಳೆ ೧೫೦ ಎಕರೆ ಜಮೀನನ್ನು ತೋಟಗಾರಿಕೆ ಇಲಾಖೆಗೆ ಬಿಟ್ಟು ಕೊಟ್ಟಲ್ಲಿ ಸಂಶೋಧನಾ ಕೇಂದ್ರ ಅಗತ್ಯತೆ ಇದೆಯೇ ಎಂಬುದನ್ನು ಪರಿಶೀಲಿಸಿ ಕೇಂದ್ರ ತೆರೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ವಿವರಗಳನ್ನು ಅನುಬಂಧ–೨ ರಲ್ಲಿ ಇಡಲಾಗಿದೆ.

ಅನುಬಂಧ–೧

ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತೋಟಗಾರಿಕಾ ಸಂಶೋಧನಾ ಕೇಂದ್ರಗಳ ವಿವರಗಳ

(ಅ) ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರಗಳು :

ಕ್ರಮ ಸಂಖ್ಯೆ	ಕೃಷಿ ವಿಶ್ವವಿದ್ಯಾನಿಲಯ ಸಂಶೋಧನಾ ಕೇಂದ್ರದ ಹೆಸರು	ಕ್ರಮ ಸಂಖ್ಯೆ	ಸಂಶೋಧನೆ ನಡೆಸುತ್ತಿರುವ ಸಂಶೋಧನಾ ಕೇಂದ್ರದ ಹೆಸರು	ಜಿಲ್ಲೆ/ ತಾಲ್ಲೂಕು
೧	೨	೩	೪	೫
೧	ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು.	೧	ಚಿಂತಾಮಣಿ	ಕೋಲಾರ
		೨	ಚಿಕ್ಕಬಳ್ಳಾಪುರ	ಕೋಲಾರ
		೩	ಅರಸೀಕೆರೆ	ಹಾಸನ
		೪	ಮಡೆನೂರು	ಹಾಸನ
		೫	ಕಂದಲಿ	ಹಾಸನ
		೬	ನಾಗೇನಹಳ್ಳಿ	ಮೈಸೂರು
		೭	ಮೂಡಿಗೆರೆ	ಚಿಕ್ಕಮಗಳೂರು
		೮	ಉಳ್ಳಾಲ	ದಕ್ಷಿಣ ಕನ್ನಡ
		೯	ಬ್ರಹ್ಮಾವರ	ದಕ್ಷಿಣ ಕನ್ನಡ
		೧೦	ಸವಿಲೆ	ಶಿವಮೊಗ್ಗ
		೧೧	ಜಿ.ಕೆ.ವಿ.ಕೆ.	ಬೆಂಗಳೂರು
೨	ಕೃಷಿ ವಿಶ್ವವಿದ್ಯಾನಿಲಯ ಧಾರವಾಡ	೧೨	ಕಲಬುರ್ಗಿ	ಬೆಳಗಾಂ
		೧೩	ಆರಭಾವಿ	ಧಾರವಾಡ
		೧೪	ಹನುವಂನವಟ್ಟಿ	ಧಾರವಾಡ
		೧೫	ಶಿರ್ಸಿ	ಉತ್ತರ ಕನ್ನಡ
		೧೬	ಸುರಪುರ	ಗುಲ್ಬರ್ಗ
		೧೭	ಷಹಾಪುರ	ಗುಲ್ಬರ್ಗ
		೧೮	ಹಗರಿ	ಬಳ್ಳಾರಿ
		೧೯	ಧಾರವಾಡ	ಧಾರವಾಡ
		೨೦	ಹಳ್ಳಿದಕೆರೆ	ಬೀದರ್
		೨೧	ರಾಯಚೂರ	ರಾಯಚೂರು
		೨೨	ಹಿಟ್ಟಳ್ಳಿ	ಬಿಜಾಪುರ
೩	ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ	೨೩	ಹೆಸರಘಟ್ಟ	ಬೆಂಗಳೂರು
		೨೪	ಬೆಟ್ಟಹಳ್ಳಿ	ಕೊಡಗು
		೨೫	ಗೋಣಿಕೊಪ್ಪಲ್	ಕೊಡಗು
೪	ಕೇಂದ್ರೀಯ ಪ್ಲಾಂಟೇಷನ್ ಬೆಳೆಗಳ ಸಂಶೋಧನಾ ಕೇಂದ್ರ	೨೬	ವಿಟ್ಲಲ್	ದಕ್ಷಿಣ ಕನ್ನಡ
		೨೭	ಹಿರೇಹಳ್ಳಿ	ತಿಮಕೂರು
೫	ಕೇಂದ್ರೀಯ ಸಾಂಬಾರು ಬೆಳೆ ಸಂಶೋಧನಾ ಕೇಂದ್ರ / ಸಾಂಬಾರು ಬೆಳೆಗಳ ನಿರ್ದೇಶನಾಲಯ	೨೮	ಸಕಲೇಶಪುರ	ಹಾಸನ
		೨೯	ಅಪ್ಪಂಗಳ	ಕೊಡಗು

ಅ) ಮೂವು ಬೆಳೆಯ ಸಂಶೋಧನೆಯಲ್ಲಿ ತೊಡಗಿರುವ ಸಂಶೋಧನಾ ಕೇಂದ್ರಗಳು :

೧	ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು	೧	ಜಿ.ಕೆ.ವಿ.ಕೆ.	ಬೆಂಗಳೂರು
		೨	ಚಿಂತಾಮಣಿ	ಕೋಲಾರ
೨	ಕೃಷಿ ವಿಶ್ವವಿದ್ಯಾನಿಲಯ ಧಾರವಾಡ	೩	ಧಾರವಾಡ	ಧಾರವಾಡ
		೪	ಹಳ್ಳಿಖೇಡ	ಬೀದರ್
		೫	ರಾಯಚೂರು	ರಾಯಚೂರು
		೬	ಹಿಟ್ನಳ್ಳಿ	ಬಿಜಾಪುರ
೩	ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ	೭	ಹೆಸರಘಟ್ಟ	ಬೆಂಗಳೂರು

ಅನುಬಂಧ—೨

ರಾಜ್ಯದ ತೋಟಗಾರಿಕೆ ಕ್ರಮಗಳ ವಿವರ:

ಕರ್ನಾಟಕ ರಾಜ್ಯದಲ್ಲಿ ಸಮಗ್ರ ತೋಟಗಾರಿಕೆಯ ಅಭಿವೃದ್ಧಿ ಸಾಧಿಸಲು ತೋಟಗಾರಿಕೆ ಇಲಾಖೆಯ ೨೦ ರಾಜ್ಯ ವಲಯದ ಯೋಜನೆಗಳು, ೨೪ ಜಿಲ್ಲಾ ವಲಯದ ಯೋಜನೆಗಳು, ೧೨ ಕೇಂದ್ರ ವಲಯದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇಂತಹ ಯೋಜನೆಗಳಲ್ಲಿ ಪ್ರಮುಖವಾದಂತಹವುಗಳ ಹೆಸರು ಮತ್ತು ಅವುಗಳಡಿಯಲ್ಲಿ ರೈತರಿಗೆ ದೊರಕುತ್ತಿರುವ ಸವಲತ್ತುಗಳ ಬಗ್ಗೆ ಈ ಕೆಳಗೆ ವಿವರಿಸಲಾಗಿದೆ.

೧) ಸಸ್ಯೋತ್ಪಾದನೆ.—ಈ ಕಾರ್ಯಕ್ರಮದಡಿಯಲ್ಲಿ ಇಲಾಖೆಯ ಕ್ಷೇತ್ರ ಫಾರಂ ಮತ್ತು ನರ್ಸರಿಗಳಲ್ಲಿ ಉತ್ಕೃಷ್ಟ ದರ್ಜೆಯ ಸಸಿ / ಸಸಿಗಳನ್ನು ಉತ್ಪಾದಿಸಿ ರೈತರಿಗೆ ಯೋಗ್ಯ ದರದಲ್ಲಿ ವಿತರಣೆ ಮಾಡಲಾಗುತ್ತಿದೆ.

೨) ತಾಳೆ ಎಣ್ಣೆ.—ಇದಕ್ಕೆ ಸಂಬಂಧಿಸಿದ ಯೋಜನೆಗಳಲ್ಲಿ ತಾಳೆ ಎಣ್ಣೆ ಪ್ರಾತ್ಯಕ್ಷಿಕೆಗಳನ್ನು ರೈತರ ಜಮೀನಿನಲ್ಲಿ ಏರ್ಪಡಿಸಲು ಎನ್‌ಪುಟ್‌ಗಳನ್ನು ನೀಡಲಾಗುತ್ತಿದೆ. ವಿದೇಶದಿಂದ ತರಿಸಿದ ತಾಳೆ ಮೊಳಕೆಗಳಿಂದ ಸಸಿಗಳನ್ನು ಮಾಡಿ ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ..

೩) ಹನಿ ನೀರಾವರಿ.—ಈ ಪದ್ಧತಿಯನ್ನು ತೋಟಗಾರಿಕೆ ಬೆಳೆಗೆ ಅಳವಡಿಸಲು ಶೇ. ೫೦ ರ ಸಬ್ಸಿಡಿ ಸವಲತ್ತುಗಳನ್ನು ನೀಡಲಾಗುತ್ತದೆ. (ಒಂದು ಹೆಕ್ಟೇರ್ ಮಾತ್ರ ರೂ. ೧೫೦೦೦-೦೦ ಕ್ಕೆ ಮಿತಗೊಳಿಸಿ)

೪) ಪ್ಲಾಂಟೇಷನ್.—ಇತರ ಬೆಳೆಗಳಾದ ಕೋಕೋ, ಅಡಿಕೆ, ಮೆಣಸು, ಇತ್ಯಾದಿ ಬೆಳೆಗಳನ್ನು ಬೆಳೆಸುವ ರೈತರು ತಮ್ಮ ಉತ್ಪಾದನೆ / ಉತ್ಪಾದಕತೆ ಹೆಚ್ಚಿಸಲು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗುತ್ತಿದೆ.

೫) ಉಷ್ಣ ವಲಯದ ಮತ್ತು ಒಣ ಪ್ರದೇಶದ ಹಣ್ಣಿನ ಬೆಳೆ.—ಈ ಅಭಿವೃದ್ಧಿ ಯೋಜನೆಯಡಿಯಲ್ಲಿ ಈ ಬೆಳೆಗಳ ಪುನರುಜ್ಜೀವನಕ್ಕಾಗಿ ಇನ್‌ಪುಟ್‌ಗಳನ್ನು ನೀಡಲಾಗುತ್ತಿದೆ.

೬) ತರಕಾರಿ ಕಿರುಚೀಲ ವಿತರಣೆ.—ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ತರಕಾರಿ ಬೀಜ, ಗೊಬ್ಬರ, ಔಷಧಿಗಳನ್ನು ವಿತರಿಸಲಾಗುತ್ತಿದೆ.

೭) ಆಲೂಗಡ್ಡೆ ನಿಜಬೀಜ.—ಈ ಯೋಜನೆಯಡಿಯಲ್ಲಿ ಪ್ರಾತ್ಯಕ್ಷಿಕೆಗಳನ್ನು ರೈತರ ಜಮೀನಿನಲ್ಲಿ ಏರ್ಪಡಿಸಲಾಗುತ್ತಿದೆ. ಮತ್ತು ನಿಜಬೀಜ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗಿದೆ.

೮) ಪುಷ್ಪಾಭಿವೃದ್ಧಿ.—ಪುಷ್ಪಾಭಿವೃದ್ಧಿಗಾಗಿ ಪ್ರಾದೇಶಿಕ ಅಭಿವೃದ್ಧಿ ಕೇಂದ್ರಗಳನ್ನು ತೆರೆದು ಸಸ್ಯಾಭಿವೃದ್ಧಿ ಮಾಡಲಾಗುತ್ತಿದೆ.

೯) ವಿಸ್ತರಣೆ ಮತ್ತು ತರಬೇತಿ.—ಈ ಯೊ ಜನೆಯಡಿಯಲ್ಲಿ ತೋಟಗಾರಿಕೆ ಬೆಳೆಗಾರಿಗೆ ಮತ್ತು ರೈತ ಮಹಿಳೆಯರಿಗೂ ಸಹ ತರಬೇತಿಯನ್ನು ಏರ್ಪಡಿಸಲಾಗುತ್ತಿದೆ.

೧೦) ಗೇರು ಅಭಿವೃದ್ಧಿ ಯೋಜನೆ.—ಈ ಯೋಜನೆಯಡಿಯಲ್ಲಿ ಸಸ್ಯ ಸಂರಕ್ಷಣೆ ಕೈಗೊಳ್ಳಲು ಔಷಧಿಗಳನ್ನು ಒದಗಿಸಲಾಗುತ್ತಿದೆ.

೧೧) ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ.—ಒಂದು ಸುಸಜ್ಜಿತ ಟಿಷ್ಯೂಕಲ್ಚರ್ ಪ್ರಯೋಗಾಲಯ ಸ್ಥಾಪಿಸಿ, ಅಲ್ಲಿ ರೋಗ ರಹಿತ ನಂಜಾಗೂಡು, ರಸಬಾಳೆ, ಇತರ ಬಾಳೆ ಹಾಗೂ ಇತರೆ ಬೆಳೆಗಳ ಸಸಿಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸಲಾಗುತ್ತಿದೆ.

೧೨) ವಿಳ್ಯದೆಲೆ ಅಭಿವೃದ್ಧಿ.—ಯೋಜನೆಯಡಿಯಲ್ಲಿ ಪ್ರಾತ್ಯಕ್ಷತೆ ಏರ್ಪಡಿಸುವಿಕೆ, ನೀರಾವರಿ ಸೌಲಭ್ಯ, ಸಸ್ಯ ಸಂರಕ್ಷಣೆಗೆ ಅನುವು ಮಾಡಲಾಗುತ್ತಿದೆ.

೧೩) ಅಣಬೆ ಬೆಳೆಯನ್ನು.—ಬೆಳೆಯುವ ರೈತರಿಗೆ ತರಬೇತಿ ಹಾಗೂ ಸ್ಪಾನ್ (ಬೀಜ) ವನ್ನು ಉತ್ಪಾದಿಸಿ ಯೋಗ್ಯ ಬೆಲೆಗೆ ನೀಡಲಾಗುತ್ತಿದೆ.

೧೪) ತೋಟಗಾರಿಕೆ.—ಬೆಳೆಗಳ ಸಸ್ಯ ಸಂರಕ್ಷಣೆ ಯೋಜನೆಯಲ್ಲಿ ರೈತರಿಗೆ ಶೇ. ೫೦ ರ ಸಬ್ಸಿಡಿ ದರದಲ್ಲಿ ಸಂರಕ್ಷಣಾ ಔಷಧಿ ವಿತರಿಸಲಾಗುತ್ತಿದೆ.

೧೫) ರಾಜ್ಯದ ತೆಂಗು.—ಬೆಳೆಯುವ ಪ್ರದೇಶದಲ್ಲಿ ಪರೋಪಜೀವಿ ಪ್ರಯೋಗಾಲಯವನ್ನು ಸ್ಥಾಪಿಸಿ ಅಲ್ಲಿ ಉತ್ಪಾದಿಸಲಾಗುತ್ತಿರುವ ಪರೋಪಜೀವಿಗಳನ್ನು ಕೀಟ ಪೀಡಿತ ರೈತರಿಗೆ ಉಚಿತವಾಗಿ ಪೂರೈಸಲಾಗುತ್ತಿದೆ. ಅಲ್ಲದೆ ಪರೋಪಜೀವಿಗಳನ್ನು ಖಾಸಗಿ ವಲಯದಲ್ಲಿ ಉತ್ಪಾದಿಸಲು ೧೫ ಪ್ರಯೋಗ ಶಾಲೆ ತೆರೆದಿದ್ದು ಅವುಗಳಲ್ಲಿ ಉತ್ಪಾದಿಸಿದ ಪರೋಪ ಜೀವಿಗಳನ್ನು ಇಲಾಖೆಯು ಕೊಂಡು ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

೧೬) ತೋಟಗಾರಿಕೆಬೆಳೆಗಳಿಗೆ.—ಧೀರ್ಘಾವಧಿ ಸಾಲ ನೀಡಿಕೆ ಯೋಜನೆಯಡಿಯಲ್ಲಿ ೧೪ ವಿವಿಧ ತೋಟಗಾರಿಕಾ ಬೆಳೆ ಬೆಳೆಯಲು ಸುಲಭ ದರದಲ್ಲಿ ಸಾಲ ಸೌಲಭ್ಯಗಳನ್ನು ಬ್ಯಾಂಕ್ ಮೂಲಕ ಏರ್ಪಡಿಸಲಾಗುತ್ತಿದೆ.

೧೭) ಟಿಷ್ಯೂಕಲ್ಚರ್ ಮೂಲಕ.—ಬಾಳೆ ಸಸಿಗಳನ್ನು ಉತ್ಪಾದಿಸಲು ನಂಜನಗೂಡು ಮತ್ತು ಹೊಸಪೇಟೆ ತಾಲ್ಲೂಕಿನಲ್ಲಿ ಖಾಸಗಿಯಾಗಿ ಅಂಗಾಂಶ ಕೃಷಿ ಪ್ರಯೋಗ ಶಾಲೆ ಸ್ಥಾಪಿಸಲು ಗರಿಷ್ಠ ರೂ. ೧೫ ಲಕ್ಷಕ್ಕೆ ಮಿತಿಗೊಳಿಸಿ ಸಹಾಯ ಧನ ನೀಡಲಾಗುತ್ತಿದೆ.

೧೮) ರಾಜ್ಯದ ಬೆಂಗಳೂರು, ತುಮಕೂರು, ಮೈಸೂರು, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಸಗಿ ವಲಯದಲ್ಲಿ ನರ್ಸರಿಯನ್ನು ಸ್ಥಾಪಿಸಲು ಗರಿಷ್ಠ ರೂ. ೨೦,೦೦೦ ಕ್ಕೆ ಮಿತಿಗೊಳಿಸಿ ಸಹಾಯ ಧನ ನೀಡಲಾಗುತ್ತಿದೆ.

೧೯) ಖಾಸಗಿ ವಲಯದಲ್ಲಿ.—ಹೈಬ್ರಿಡ್ ತರಕಾರಿ ಬೀಜ ಉತ್ಪಾದಿಸಲು ಗರಿಷ್ಠ ರೂ. ೫ ಲಕ್ಷಕ್ಕೆ ಮಿಗೊಳಿಸಿ ಸಹಾಯ ಧನ ನೀಡಲಾಗುತ್ತಿದೆ.

೨೦) ಕೃಷಿಯಲ್ಲಿ.—ಪ್ಲಾಸ್ಟಿಕ್ ಬಳಿಕೆ ಯೋಜನೆಯಡಿಯಲ್ಲಿ ಗ್ರೀನ್‌ಹೌಸ್ ನಿರ್ಮಾಣಕ್ಕಾಗಿ ಸಹಾಯ ಧನ ನೀಡಲಾಗುತ್ತಿದೆ. ಇದರಲ್ಲಿ ಕಡಿಮೆ ವೆಚ್ಚದ ಗ್ರೀನ್ ಹೌಸ್‌ಗೆ ಶೇ.೫೦ ರಷ್ಟು ಗರಿಷ್ಠ ೩೧,೨೫೦ ರೂ. ಗಳಿಗೆ ಮಿತಿಗೊಳಿಸಿ ಮಧ್ಯಮ ವೆಚ್ಚದ ಗ್ರೀನ್ ಹೌಸ್ ನಿರ್ಮಾಣಕ್ಕಾಗಿ ಶೇ.೪೦ ರಷ್ಟು ಗರಿಷ್ಠ ೧.೦ ಲಕ್ಷ ರೂ. ಗಳಿಗೆ ಮಿತಿಗೊಳಿಸಿ ಮತ್ತು ಅಧಿಕ ವೆಚ್ಚದ ಗ್ರೀನ್ ಹೌಸ್ ನಿರ್ಮಾಣಕ್ಕಾಗಿ ಶೇಕಡ ೧೦ ರಷ್ಟು ಗರಿಷ್ಠ ೧.೦ ಲಕ್ಷ ರೂ.ಗಳಿಗೆ ಮಿತಿಗೊಳಿಸಿ ಸಹಾಯ ಧನವನ್ನು ನೀಡಲಾಗುತ್ತಿದೆ.

೨೧) ಒಂದು ಹವಾ.—ನಿಯಂತ್ರಿತ ಪುಷ್ಪಗಳ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿರುವ ಇಂದಿರಾ ನಗರ ತೋಟಗಾರಿಕೆ ಕ್ಷೇತ್ರದಲ್ಲಿ ನಿರ್ಮಿಸಲಾಗುತ್ತಿದೆ.

೨೨) ಬೆಂಗಳೂರಿನಲ್ಲಿರುವ.—ಇಲಾಖಾ ಕ್ಷೇತ್ರವಾದ ಹುಳಿಮಾವಿನಲ್ಲಿ ೧.೪ ಕೋಟಿ ರೂ.ವೆಚ್ಚದಲ್ಲಿ ಅತ್ಯಾಧುನಿಕ ಬೃಹತ್ ಪ್ರಮಾಣದ ಟಿಷ್ಯೂಕಲ್ಚರ್ ಪ್ರಯೋಗಾಲಯವನ್ನು ನಿರ್ಮಾಣ ಮಾಡಲಾಗುತ್ತಿದೆ.

೨೩) ಕರ್ನಾಟಕ ರಾಜ್ಯದಲ್ಲಿ.—ಮಾರುಕಟ್ಟೆ ವ್ಯವಸ್ಥೆ ಬಲಪಡಿಸಲು ಹಾಪ್‌ಕಾಮ್ಸ್‌ನ ಕಾರ್ಯಕ್ಷೇತ್ರ ವಿಸ್ತರಿಸುವುದು ಮತ್ತು ಮೂಲ ಸೌಕರ್ಯಗಳಾದ ಮಾರಾಟ ಮಳಿಗೆಗಳು, ಸಂಗ್ರಹಣಾ ಕೇಂದ್ರಗಳು ಮತ್ತು ಶೀತಲ ಗೃಹಗಳ ನಿರ್ಮಾಣಕ್ಕೆ ಧನ ಸಹಾಯ ಒದಗಿಸಲಾಗಿದೆ.

೨೪) ರಾಜ್ಯದ.—ಆಯ್ದ ಸ್ಥಳಗಳಲ್ಲಿ ತೋಟಗಾರಿಕೆ ಸಂಘಗಳ ಸಹಕಾರ ಸಂಘಗಳು ಇತ್ಯಾದಿಗಳ ಮೂಲಕ ಶೀತಲ ಗೃಹ ಸ್ಥಾಪಿಸಲು ಧನ ಸಹಾಯ ನೀಡಲಾಗುತ್ತಿದೆ.

೨೫) ಆಯ್ದ.—ಹಣ್ಣು ಮತ್ತು ತರಕಾರಿಗಳ ಸಂಸ್ಕರಣಾ ಘಟಕಗಳನ್ನು ಬಲಪಡಿಸಲು ಧನ ಸಹಾಯ ನೀಡಲಾಗುತ್ತಿದೆ.

೨೬) ಹಾಪ್‌ಕಾಮ್ಸ್.—ಮೂಲಕ ಸಣ್ಣ ಮತ್ತು ಅತಿಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ತರಕಾರಿ ಬೀಜ ವಿತರಿಸಲು ಕ್ರಮ ಏರ್ಪಡಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ 'ಅಪನಾದೇಶ್' ಕಾರ್ಯಕ್ರಮದ ಅನ್ವಯ ಆಗಿರುವ ಪ್ರಗತಿ

೫೦೧(ಳಿ೨) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ವತಿಯಿಂದ ಸಾರ್ವಜನಿಕ ಸಹಭಾಗಿತ್ವದ "ಅಪ್ನಾದೇಶ್" ಕಾರ್ಯಕ್ರಮದನ್ವಯ ಸಾರ್ವಜನಿಕರಿಂದ ಬಂದಿರುವ ಮನವಿ ಎಷ್ಟು ಹಾಗೂ ಎಷ್ಟು ಮೊತ್ತದ ಕಾಮಗಾರಿ ಕೈಗೊಳ್ಳಲಾಗಿದೆ?

(ಆ) ಅದಕ್ಕಾಗಿ ರಾಜ್ಯ ಸರ್ಕಾರದಿಂದ ಶೇ. ೫೦ ರಷ್ಟು ಹಣ ಭರಿಸಲು ಒಪ್ಪಿಕೊಳ್ಳಲಾಗಿದೆಯೇ?

(ಇ) ಈ ಹಣ ಜಿಲ್ಲಾ ಪಂಚಾಯತ್ ಮೂಲಕ ಭರಿಸಲಾಗಿದೆಯೇ? (ಸಾರ್ವಜನಿಕ ಸಹಭಾಗಿತ್ವದ ವಿಶೇಷ ಯೋಜನೆ)

(ಈ) ಇದೇ ರೀತಿಯ ಯೋಜನೆಯನ್ನು ಬೇರೆ ಜಿಲ್ಲೆಗೆ ಅನ್ವಯಿಸಲು ಸರ್ಕಾರ ಯೋಚಿಸಬಹುದೇ?

ಶ್ರೀ ಎಂ. ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಜಿಲ್ಲಾ ಪಂಚಾಯತ್ ನೇರವಾಗಿ ಹಣ ಸಂಗ್ರಹಿಸಿರುವುದಿಲ್ಲಾ. ಜನರ ಸಾಮೂಹಿಕ ಅವಶ್ಯಕತೆಗಳ ಪೂರೈಕೆಗಾಗಿ ಒಟ್ಟಿಗೆ ಶ್ರಮಿಸಲು "ಅಪ್ನಾದೇಶ್" ಅಸೋಸಿಯೇಷನ್ (ರಿ) ಎಂಬ ಸ್ವಯಂಸೇವಾ ಸಂಸ್ಥೆ ಸಂಘಟಿತಗೊಂಡಿದೆ. ನಗದು ಹಾಗೂ ವಸ್ತು ರೂಪದಲ್ಲಿ ಸಾರ್ವಜನಿಕರ ವಂತಿಕೆ ಅಂದಾಜು ರೂ. ೧೦೦ ಲಕ್ಷ ಮೀರಿದೆ. ಸಾರ್ವಜನಿಕರೇ ದೇಣಿಗೆಯನ್ನು ಸಂಗ್ರಹಿಸಿ ಕಾಮಗಾರಿಯನ್ನು ನಿಗದಿಪಡಿಸಿದಂತೆ ಅನುಷ್ಠಾನಗೊಳಿಸುವರು. ಅಂದಾಜು ರೂ. ೧೨೯ ಲಕ್ಷದ ಕಾಮಗಾರಿ ಕೈಗೊಳ್ಳಲಾಗಿದೆ.